ಶ್ರೀ ಡಿ. ದೇವರಾಜ ಅರಸ್

ಸಾಧ್ಯವಾದಷ್ಟೂ ಹೆಚ್ಚು ಲಿಕ್ಕರನ್ನೇ ಮಾರಾಟ ಮಾಡಬೇಕಾಗುತ್ತದೆ. ಇಲ್ಲವೇ ಮತ್ತೆ ಪ್ರೊಹಿಬಿಷನ್ನನ್ನು ಜಾರಿಗೆ ತರಬೇಕು. ಪ್ರೊಹಿಬಿಷನ್ ಇದ್ದಾಗಲಂತೂ ಆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆಯುತ್ತಿದ್ದಷ್ಟು ಧಾಂದಲೆ ಮತ್ತೆಲ್ಲಿಯೂ ನಡೆಯುತ್ತಿರಲಿಲ್ಲ.

SRI B. B. SAYANAK.—May I know whether it is a fact that the son of an M.L.A. is a contractor at Belgaum and the M.L.A. is using his influence to start liquor shops near the Schools and Temples, in Belgaum ?

SRI DEVARAJ URS.—In the first instance, I do not know who that son of an M.L.A. is. Secondly, I do not know whether he is a major or a minor. In case he is a minor, he cannot be a contractor. In case he is a major, nothing prevents a son of an M.L.A. from becoming a a contractor. Thirdly, if this contractor, who is said to be the son of an M.L.A. is trying to make use of the influence of his father, certainly, it is wrong and if the hon. Member were to prove that this contractor is opening the shops and other things without the knowledge of the authorities or against the Rules, certainly, the department will take action against him.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಸುಧಾರಿಸಿದ ಮೇಲೆ ಹಾಲಿ ಇರತಕ್ಕ ಕಂಟ್ರಾಕ್ಟ್ ಪದ್ಧತಿಯನ್ನು ಬದಲಾಯಿಸಿ ಕೆಲವು ಸಣ್ಣ ಸಣ್ಣ ಕಂಟ್ರಾಕ್ಟರುಗಳಿಗೂ ಲೈಸೆನ್ಸ್ ಕೊಡತಕ್ಕ ಪದ್ಧತಿಯನ್ನು ಮತ್ತೆ ರಿವೈಜ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್ —ನಮಗೆ ಈಗ ಮುಖ್ಯವಾಗಿ ಹಣ ಬೇಕು. ತಾವೇ ಅನೇಕ ಸಂದರ್ಭಗಳಲ್ಲಿ ನಮಗೆ ಆ ಪ್ರಾಜೆಕ್ಟ್ ಬೇಕು ಈ ಪ್ರಾಜೆಕ್ಟ್ ಬೇಕೆಂದು ಕೇಳುತ್ತಿರುತ್ತೀರಿ. ಅದಕ್ಕೆಲ್ಲಾ ವಿಶೇಷವಾಗಿ ಹಣ ಬೇಕು. ಈ ೫ ವರ್ಷಗಳು ಕಳೆಯಲಿ. ಮುಂದಿನ ವಿಚಾರ ಮುಂದಕ್ಕೆ ನೋಡೋಣ. ನಮಗೆ ದೊಡ್ಡ ಜಲಾಶಯಗಳಿಗಾಗಿ ವಿಶೇಷ ಹಣ ಬೇಕಾಗಿದೆ.

HANDLING OF MANGANESE ORE

547. SRI KONANDUR LINGAPPA.—(Thirthahalli)

Will the Minister for Industries be pleased to state—

(*a*) whether it has come to the notice of the Government that the State will get more revenue if the extraction, transportaion, *etc.*, of Manganese ore is handled by the Government instead of entrusting the same to private parties ;

(*b*) whether the Government intend to establish a Manganese Factory in thirthahalli. Hosanagar areas of Shimoga district in Malnad area where Manganese is available in abundance :

(*c*) whether the Government have considered the question of establishing a small Manganese factory near Kodachadri Hill at a cost of Rupees one crore ?

SRI S. M. KRISHNA.—(Minister for Industries)

(a) No.

(b) No.

(c) No.

ಶ್ರೀ ಕೋಣಂದೂರು ಲಿಂಗಪ್ಪ.—ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕುಗಳಲ್ಲಿ ದೊರೆಯತಕ್ಕ ಮ್ಯಾಂಗನೀಸ್ ಓರಿನ ಅಂಶ, ಅದರ ಉತ್ಕೃಷ್ಟತೆ ಮತ್ತು ಅದು ಅಲ್ಲಿ ಯಾವ ಯಾವ ಪ್ರಮಾಣದಲ್ಲಿ ದೊರೆಯುತ್ತದೆಂಬ ಬಗ್ಗೆ ಮಾನ್ಯ ಸಚಿವರ ಅಭಿಪ್ರಾಯವೇನಿದೆ ಅನ್ನುವುದನ್ನು ತಿಳಿಸುವುದಕ್ಕಾಗುತ್ತದೆಯೇ ?

‡ ಶ್ರೀ ಎಸ್. ಎಂ. ಕೃಷ್ಣ.—ಆ ಎಲ್ಲಾ ವಿವರಗಳಿಗೂ ಒಟ್ಟಿಗೆ ಸೇರಿಸಿ ಉತ್ತರದಲ್ಲೇ ''ಇಲ್ಲ'' ಎಂದು ಹೇಳಿ ತಿಳಿಸಿದ್ದೇವೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಹಿಂದೆ ಅಲ್ಲಿ ಸರ್ಕಾರದವರು ಬಿ.ಎಂ.ಎಲ್. ಎನ್ನತಕ್ಕ ಕಂಪೆನಿಯವರಿಗೆ ಲೈಸೆನ್ಸ್ ಕೊಟ್ಟು, ಅವರು ಅಲ್ಲಿ ಲುಕ್ಸಾನು ಹೊಂದಿ ಕೈಬಿಟ್ಟ ನಂತರ ಆದೇ ಸ್ಥಳಕ್ಕೆ ಮತ್ತು ಎಂ ಎಂ ಎಲ್. ಕಂಪೆನಿಯವರಿಗೆ ಲೈಸೆನ್ಸ್ ಕೊಟ್ಟು ಅವರಿಗೂ ಅದೇ ನಷ್ಟವಾದ್ದರಿಂದ ಅವರೂ ಕೂಡ ಈಗ ಅದನ್ನು ಕೈಬಿಡತಕ್ಕ ಸ್ಥಿತಿಯಲ್ಲಿರುವುದರಿಂದ ಅಲ್ಲಿ ಖಾಸಗಿಯವರಿಗೂ ಸಾಧ್ಯವಾಗದೆ ಇದ್ದ ಕಾರಣ ಅಲ್ಲಿ ಸರ್ಕಾರದವರೇ ಆ ಓರನ್ನು ಕಲೆಕ್ಟ್ ಮಾಡುತ್ತಿದ್ದರೂ ಅದು ಸಾಲದೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿಲ್ಲವೆ ?

ಶ್ರೀ ಎಸ್. ಎಂ. ಕೃಷ್ಣ.— ಹಿಂದೆ Board of Mineral Development ಎಂಬ ಸಂಸ್ಥೆ ಅಸ್ತಿತ್ವದಲ್ಲಿತ್ತು. ಇತ್ತೀಚೆಗೆ ಅದನ್ನು ಮೈಸೂರು ಮಿನರಲ್ಸ್ ಎಂದು ಪರಿವರ್ತನೆ ಮಾಡಲಾಯಿತು. ಆ ಕಾಲದಿಂದಲೂ ಅದರಿಂದ ನಮಗೆ ಲಾಭ ಸಾಕಷ್ಟು ಬರುತ್ತಿದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸರ್ಕಾರದ ವತಿಯಿಂದ ನಡೆಯುತ್ತಿರುವ ಸಂಸ್ಥೆಗಳಿಗಿಂತ ಖಾಸಗೀ ವಲಯದಲ್ಲಿ ನಡೆಯತಕ್ಕ ಸಂಸ್ಥೆಗಳಿಗೇ ಹೆಚ್ಚು ಲಾಭ ಬರುತ್ತದೆ ಎಂದು ಹೇಳುತ್ತಿದ್ದಾಗ್ಯೂ ರಾಜ್ಯ ಹಾಗೂ ಕೇಂದ್ರ ಸರ್ಕಾರದವರ ನೀತಿಗನುಸಾರವಾಗಿ ಅದು ಯಾವ ಉದ್ದಿಮೆಯೇ ಆಗಲಿ—ಕಲ್ಲಿದ್ದಲಿ ಗಣಿಯಾಗಲಿ, ಕಬ್ಬಿಣದ ಅದಿರನ್ನು ತೆಗೆಯುತಕ್ಕ ಗಣಿಯಾಗಲೀ ಇಲ್ಲವೇ ಚಿನ್ನದ ಗಣಿಯಾಗಲೀ, ಇವೆಲ್ಲವೂ ಸಾರ್ವಜನಿಕ ಕ್ಷೇತ್ರದಲ್ಲೇ ನಡೆಯಬೇಕೆಂಬ ನೀತಿ ಇರುವುದಿಲ್ಲವೇ ? ಹಾಗಿದ್ದರೆ ಇಲ್ಲಿ ತಾವು ತಾಳಿರತಕ್ಕ ಧೋರಣೆ ಅದಕ್ಕೆ ವಿರೋಧವಾಗಿದೆಯಲ್ಲವೇ ?

ಶ್ರೀ ಎಸ್. ಎಂ. ಕೃಷ್ಣ.—ಸಂಪೂರ್ಣವಾಗಿ ಈ ಗಣಿ ಉದ್ದಿಮೆಯನ್ನು ರಾಷ್ಟ್ರೀಕರಣ ಮಾಡಬೇಕೆಂಬುದೇ ನಮ್ಮ ಧ್ಯೇಯ. ಆದರೆ ಅದಕ್ಕೆ ನಮ್ಮ ಸಂಪನ್ಮೂಲಗಳ ಅಭಾವದಿಂದ ನಾವು ಈ ದಿವಸ ಈ ಉದ್ದಿಮೆಯನ್ನು ಮಿನರಲ್ಸ್ ಲಿಮಿಟೆಡ್ ಮತ್ತು ಎಂ.ಎಂ ಟಿಸಿ. ಇತ್ಯಾದಿ ಕಂಪೆನಿಯವರ ಸಹಾಯವನ್ನು ಪಡೆಯದೆ ನಡೆಸುವುದಕ್ಕೆ ಸಾಧ್ಯವೇ ಇಲ್ಲ. ಇಲ್ಲಿ ಮುಖ್ಯವಾಗಿ ರಾಜ್ಯದಲ್ಲಿ ಉದ್ದಿಮೆಗಳ ಕೆಲಸ ಕುಂಠಿತವಾಗದಂತೆ ನಡೆಸಿಕೊಂಡು ಹೋಗಬೇಕಾಗಿದೆ.

ಒಬ್ಬ ಮಾನ್ಯ ಸದಸ್ಯರು.—ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕುಗಳಲ್ಲಿ ಮ್ಯಾಂಗನೀಸ್ ಓರ್ ಉತ್ಕೃಷ್ಟವಾದ್ದು ಸಿಕ್ಕುತ್ತಿರುವಂತೆ ನಮ್ಮ ಚಿನ್ನಗಿರಿ ತಾಲ್ಲೂಕಿನಲ್ಲಿ ಹೇರಳವಾಗಿ ಸಿಕ್ಕುತ್ತದೆ ಎಂಬುದು ಸರ್ಕಾರದವರಿಗೆ ಗೊತ್ತಿಲ್ಲವೇ ?

ಶ್ರೀ ಎಸ್. ಎಂ. ಕೃಷ್ಣ.—ನಮ್ಮ ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ಬಹಳ ಪ್ರಶಸ್ತವಾದ ಅನೇಕ ಲೋಹಗಳು, ಉತ್ಕೃಷ್ಟವಾದ ಲೋಹಗಳು ದೊರೆಯುತ್ತವೆಂಬುದರಲ್ಲಿ ಸಂದೇಹವೇ ಇಲ್ಲ. ಚಿನ್ನಗಿರಿಯಲ್ಲೂ ಕೂಡ ಉತ್ಕೃಷ್ಟವಾದ ಓರ್ ಸಿಕ್ಕುತ್ತದೆ. ಅಲ್ಲದೆ ಅಲ್ಯೂಮಿನಿಯಂ ತಯಾರಿಸುವುದಕ್ಕೆ ಬೇಕಾದ ಬಾಕ್ಸೈಟ್ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೇರಳವಾಗಿ ಸಿಕ್ಕುತ್ತಿದೆ. ಅದನ್ನು ಮಂದ್ರಾಸಿಗೆ ಕಳುಹಿಸಿ ಅಲ್ಲಿ ಮಾರಾಟ ಮಾಡಬೇಕೆಂಬ ಆಲೋಚನೆ ನಡೆಯುತ್ತಿದೆ. ಆದರೆ ಇಲ್ಲಿ ದೊರೆಯತಕ್ಕ ಲೋಹಗಳನ್ನು ಉಪಯೋಗಿಸಿ ಕಾರ್ಖಾನೆಗಳನ್ನು ತೆರೆಯಲು ಯಾರಾದರೂ ಖಾಸಗೀ ಜನರು ಮುಂದೆ ಬಂದರೆ ಅಂದರೆ, ಹೊಸನಗರ ಮತ್ತು ತೀರ್ಥಹಳ್ಳಿಗಳಲ್ಲಿ ತೆರೆಯುವುದಕ್ಕೆ ಮುಂದೆ ಬಂದರೆ ಸರ್ಕಾರದವರು ಅವರಿಗೆ ಸಾಮಾನ್ಯವಾಗಿ ಏನೇನು ಸೌಲಭ್ಯಗಳನ್ನು ಒದಗಿಸಬಹುದೋ ಅವುಗಳನ್ನೆಲ್ಲಾ ಒದಗಿಸುವುದಕ್ಕೆ ತಯಾರಾಗಿದ್ದಾರೆಂದು ಹೇಳಬಹುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಯಾರಾದರೂ ಓರ್ ತೆಗೆಯುವುದಕ್ಕೆ ಲೈಸೆನ್ಸಿಗೆ ಅರ್ಜಿ ಹಾಕಿದಾಗ ಅವರಿಗೆ ನೇರವಾಗಿ ಲೈಸೆನ್ಸ್ ಕೊಡುತ್ತಿರೋ ಅಥವಾ ಸ್ಥಳ ಪರಿಶೀಲನೆ ಮಾಡಿ ಕೊಡುತ್ತೀರೋ ?

ಶ್ರೀ ಎಸ್. ಎಂ. ಕೃಷ್ಣ.—ಸರ್ಕಾರದವರೇ ಕೆಲವು ಪ್ರದೇಶಗಳನ್ನು ರಿಜರ್ವ್ಡ್ ಮಾಡಿಕೊಂಡಿರುತ್ತಾರೆ. ಇನ್ನು ಯಾರಾದರು ಅರ್ಜಿಗಳನ್ನು ಲೈಸೆನ್ಸಿಗಾಗಿ ಹಾಕಿಕೊಂಡಿದ್ದಾಗ ಅವರಿಗೆ ಪ್ರಾಸ್ಪೆಕ್ಟೀವ್ ಲೈಸೆನ್ಸ್ ಎಂದು ಕೊಡುತ್ತೇವೆ. ಅವರು ಅಲ್ಲಿ ಹೋಗಿ ನೋಡಿ ಅಂದಾಜು ಎಷ್ಟು ಸಿಕ್ಕಬಹುದು ಎಂಬುದನ್ನು ನೋಡಿಕೊಂಡು ಬಂದ ನಂತರ ಅವರಿಗೆ ಅಲ್ಲಿ ಅಗತ್ಯವಿದೆ ಎಂದರೆ ಆ ಲೀಜನ್ನು ಅವರಿಗೆ ಫಾರ್ಮಲ್ಲಾಗಿ ಮಂಜೂರು ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ ಮಾತ್ರವಲ್ಲದೆ ಹಿಕಾರಿಪುರ, ಸೊರಬ ಮುಂತಾದ ಕಡೆಗಳಲ್ಲೂ ಮ್ಯಾಂಗನೀಸ್ ಅದರು ದೊರೆಯುವುದು ಆದುದರಿಂದ ಅದನ್ನು ಉಪಯೋಗ ಮಾಡಿಕೊಳ್ಳಲು ಆ ಪ್ರದೇಶದಲ್ಲಿ ಒಂದು ಕಾರ್ಖಾನೆ ತರೆಯುವುದನ್ನು ಪರಿಶೀಲಿಸುವಿರಾ?

ಶ್ರೀ ಎಸ್. ಎಂ ಕೃಷ್ಣ :—ಸರಕಾರ ನೇರವಾಗಿ ಕಾರ್ಖಾನೆಯನ್ನು ಸ್ಥಾಪಿಸುವುದು ಬಹಳ ಕಷ್ಟ ಸಾಧ್ಯವಾದ ಕೆಲಸ ನಾನು ಅಶ್ವಾಸನೆ ಕೊಟ್ಟಿರುವ ಹಾಗೆ ಖಾಸಗಿ ಜನರು ಯಾರಾರೂ ಮುಂದೆ ಬಂದು ಪ್ರೈವೇಟ್ ಸೆಕ್ಟಾರಿನಲ್ಲಾಗಲೀ ಅಥವಾ ಜಾಯಿಂಟ್ ಸೆಕ್ಟಾರಿನಲ್ಲಾಗಲಿ ಕಾರ್ಖಾನೆ ತೆರೆಯುವುದಾದರೆ ನಾವು ಸಹಾಯ ಮಾಡುತ್ತೇವೆ.

ಶ್ರೀ ಕೋನಂಡೂರು ಲಿಂಗಪ್ಪ.—ಒಂದು ಕೋಟಿ ರೂಪಾಯಿಗಳಲ್ಲಿ ಕಾರ್ಖಾನೆ ಸ್ಥಾಪಿಸುವ ಯೋಜನೆ ವಿಚಾರವನ್ನು ಪತ್ರಿಕೆಯಲ್ಲಿ ನೋಡಿದೆ ಅದರಂತೆ ಸರಕಾರವೇ ಶಿವಮೊಗ್ಗ ಜಿಲ್ಲೆಯಲ್ಲಿ ಕೊಡಚಾದ್ರಿಯ ಬಳಿ ಏಕೆ ಎಂದು ಕಾರ್ಖಾನೆ ಸ್ಥಾಪಿಸಬಾರದು? ಮೈಸೂರಿನ ಮ್ಯಾಂಗನೀಸ್ ಅದುರು ಉಪಯೋಗ ಮಾಡುವುದು ಲಾಭದಾಯಕವೆಂದು ಮೈಸೂರು ಮಿನರಲ್ಸ್ ಲಿಮಿಟೆಡ್ ನವರು ಹೇಳುವಾಗ ಖಾಸಗಿಯವರಿಗೆ ಬಿಡದೆ ಸರಕಾರವೇ ಒಂದು ಕಾರ್ಖಾನೆ ಸ್ಥಾಪಿಸಿ ಲಾಭ ಪಡೆಯಲು ಏಕೆ ಪ್ರಯತ್ನ ಮಾಡಬಾರದು ?

ಶ್ರೀ ಎಸ್. ಎಂ. ಕೃಷ್ಣ :—ಮೈಸೂರು ಮಿನರಲ್ಸ್ ಲಿಮಿಟೆಡ್ ನವರು ಮೈನ್ ಮಾಡುವರು. ಕಾರ್ಖಾನೆಯನ್ನು ಬೇರೆ ಸಂಸ್ಥೆಯ ಆಶ್ರಯದಲ್ಲಿ ಸ್ಥಾಪಿಸಬೇಕಾಗುವುದು. ಒಂದು ಕೋಟಿ ರೂಪಾಯಿ ಎಂಬುದು ಬಹಳ ದೊಡ್ಡ ಹಣ. ನಮ್ಮ ಸರಕಾರ ನೇರವಾಗಿ ಒಂದು ಕೋಟಿ ರೂಪಾಯಿ ಹಾಕಲು ಬಹಳ ಕಷ್ಟ. ಒಂದು ಕೋಟಿ ರೂಪಾಯಿ ದೊರೆತರೆ ಸ್ಥಾಪಿಸಬಹುದು. ಸಂಪನ್ಮೂಲ ಅನುಕೂಲವಾದಾಗ ಈ ವಿಚಾರ ಸರಕಾರ ಪರಿಶೀಲಿಸುವುದು.

SUPPLY OF TRACTORS TO AGRICULTURISTS

564. Sri S. Kariappa (Kanakapura).—

Will the Minister for Agriculture and Forests be pleased to state.

(*a*) the number of applications received for the supply of tractors for agricultural purposes during the past three years in the State (Yearwise information);

(*b*) the number of tractors supplied to the Agriculturists :

(i) on hire purchase system

(ii) on cash purchase system

(*c*) the variety and number of tractors supplied;

(*d*) the number of each make and the cost of each tractor;

(*e*) whether it has come to the notice of Government that the